**<u>ಸಾಕ್ಷಿಯನ್ನು ದಿಃ 28.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಈ.ಎಂ. ವಕೀಲರಿಂದಃ-</u>**

ನಾನು ಎಂ.ಬಿ.ಎ ಪದವೀಧರ. ಈ ಪ್ರಕರಣದ ವಾದಿ ಹೆಚ್.ಎ ಕೃಷ್ಣಮೂರ್ತಿ ನನ್ನ ತಂದೆ. ಈ ಪ್ರಕರಣದ ಪ್ರತಿವಾದಿಗಳು ಸುಮಾರು 20-25 ವರ್ಷಗಳಿಂದಲೂ ಪರಿಚಯ. ನಾನು ಈ ಪ್ರಕರಣದ ವ್ಯವಹಾರದಲ್ಲಿ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ನನ್ನ ತಂದೆ ಜೊತೆ ನಾನು ಹಣದ ವ್ಯವಹಾರ ಮಾಡಿಲ್ಲ. ನನ್ನ ತಂದೆ ಯಾರಿಗೆ ಸಾಲ ಕೊಟ್ಟಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತು. ನನ್ನ ತಂದೆ ಮಾಡಿರುವಂತಹ ಎಲ್ಲಾ ವ್ಯವಹಾರಗಳಿಗೂ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ, ಆದರೆ ಈ ಕೇಸ್ ಮಾಡಿದ ವ್ಯವಹಾರದಲ್ಲಿ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ತಂದೆ ನನ್ನ ಜೊತೆಯೆ ವಾಸ ಇರುತ್ತಾರೆ. ತಂದೆ ಈ ಕೇಸ್ ನಲ್ಲಿ ಹಣ ಕೊಡುವ ಕಾಲಕ್ಕೆ ಹುಣಸೂರಿನ ಹೌಸಿಂಗ್ ಬೋರ್ಡ ಕಾಲೋನಿಯಲ್ಲಿ ವಾಸ ಇದ್ದೇವು. ಅದೇ ರೀತಿ ಆನ್ ಡಿಮ್ಯಾಂಡ್ ಪ್ರನೋಟ್ ನಲ್ಲಿ ಅದೆ ವಿಳಾಸವನ್ನು ನಮೂದಿಸಿರುತ್ತೇವೆ. ನಾನು ಸಾಕ್ಷಿಯಾಗಿ ಸಹಿ ಮಾಡುವ ಸಂದರ್ಭದಲ್ಲಿ ಮೈಸೂರಿನ ವಿಜಯನಗರದ ವಿಳಾಸವನ್ನು ನಮೂದಿಸಿರುತ್ತೇನೆ ಎಂದರೆ ಸರಿ. ನಾನೆ ಬೇರೆ ವಿಳಾಸವನ್ನು ನಮೂದಿಸಿದ್ದು, ನನ್ನ ತಂದೆಯೆ ಬೇರೆ ವಿಳಾಸವನ್ನು ನಮೂದಿಸಿರುತ್ತಾರೆ ಎಂದರೆ ಮೈಸೂರಿನಲ್ಲಿ ನಾನು ಕೆಲಸ ಮಾಡುತ್ತಿದ್ದ ಕಾರಣ ಸದರಿ ವಿಳಾಸವನ್ನು ನಮೂದಿಸಿರುತ್ತೇನೆ ಎನ್ನುತ್ತಾರೆ. ಯಾವುದೆ ವ್ಯವಹಾರ ಮಾಡಬೇಕಾದರೆ ಕುಟುಂಬದವರನ್ನು ಹೊರತು ಪಡಿಸಿ ಬೇರೆಯವರನ್ನು ಸಾಕ್ಷಿ ಮಾಡಬೇಕಾಗುತ್ತದೆ ಎಂದರೆ ಸರಿ, ಸಾಕ್ಷಿ ಪುನಃ ಆ ಸಮಯದಲ್ಲಿ ಕೊರೋನ ಇದ್ದ ಕಾರಣ ಬೇರೆಯವರನ್ನು ಸಾಕ್ಷಿಯಾಗಿ ಮಾಡಲು ಅಗದೆ ಇದ್ದ ಕಾರಣ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೆ ಎನ್ನುತ್ತಾರೆ.

ಹಣದ ವ್ಯವಹಾರ ಮಂಗಳಾ ಎಂಬ ನೋಟರಿ ವಕೀಲರ ಕಛೇರಿಯಲ್ಲಿ ನಡೆದಿರುತ್ತದೆ. ಅದಕ್ಕೂ ಮೊದಲು ಹುಣಸೂರಿನಲ್ಲಿ ವ್ಯವಹಾರದ ಮಾತುಕತೆ ಆಗಿತ್ತು. ನನ್ನ ಎದುರೇ ಪತ್ರ ವ್ಯವಹಾರ ಆಗಿರುತ್ತದೆ. ಹಣ ಕೊಡುವ ಕಾಲಕ್ಕೆ 100 ರೂ.ಮುಖ ಬೆಲೆಯ ನೋಟುಗಳನ್ನು ಕೊಟ್ಟಿದ್ದು ನುಡಿದು ನಂತರ 500 ರೂ.

ಮುಖ ಬೆಲೆಯ ನೋಟುಗಳನ್ನು ಕೊಡಲಾಗಿತ್ತು ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಯಾವುದೆ ಹಣಕಾಸಿನ ವ್ಯವಹಾರ ನಡೆದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹಾಕಿರುವ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಅಥವಾ ಇತರೆ ಸಾಕ್ಷಿದಾರರ ಸಮಕ್ಷಮ ವಾದಿಯಿಂದ ಪ್ರತಿವಾದಿಗಳು ಹಣ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಮಾಡಿಕೊಂಡಿರುವ ಆನ್ ಡಿಮ್ಯಂಡ್ ಪ್ರನೋಟ್ ಗೆ ಮಗ ಸಾಕ್ಷಿಯಾಗಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.